<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,ರವರ ನ್ಯಾಯಾಲಯ, ಕಡೂರು</u>

ಕ್ರಿಮಿನಲ್ ಮಿಸ್.ನಂ.231/2018

ದಿನಾಂಕಃ02-11-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಆರ್.ಡಬ್ಲ್ಯುಃ1

| | | |
|---|---|---|
| ಸಾಕ್ಷಿಯ ಹೆಸರು | ಃ | ಲಕ್ಷ್ಮೀಕಾಂತ |
| ತಂದೆಯ ಹೆಸರು | ಃ | ನಾರಾಯಣ |
| ವಯಸ್ಸು | ಃ | 45 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸ | ಃ | ಬಾಣಾವರ |

<u>**ಮುಖ್ಯ ವಿಚಾರಣೆಃ ಶ್ರೀಮತಿ ಹೆಚ್.ವಿ.ಜಿ. ವಕೀಲರಿಂದಃ**</u>

ಅರ್ಜಿದಾರಳು ನನ್ನ ಹೆಂಡತಿ, ಮದುವೆಯಾದ ನಂತರ ಅರ್ಜಿದಾರಳು ನಿಮಗೆ ವಯಸ್ಸಾಗಿದೆ, ನಿಮ್ಮನ್ನು ಮದುವೆಯಾಗಲು ನನಗೆ ಇಷ್ಟ ಇರಲಿಲ್ಲ, ತಂದೆ-ತಾಯಿಯರ ಬಲವಂತಕ್ಕಾಗಿ ನನ್ನನ್ನು ಮದುವೆ ಮಾಡಿಕೊಂಡಿರುವುದಾಗಿ ತಿಳಿಸಿದ್ದರು. ಅರ್ಜಿದಾರಳು ಸರಿಯಾಗಿ ನಮ್ಮ ಮನೆಗೆ ಬರುತ್ತಿರಲಿಲ್ಲ. ಅರ್ಜಿದಾರಳು ವಿನಃ ಕಾರಣ ಕೈ ಕುಯ್ದುಕೊಳ್ಳುವುದು, ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸುವುದು ಮಾಡಿರುತ್ತಾಳೆ, ಈ ಕುರಿತು ಪಂಚಾಯ್ತಿ ಮಾಡಲಾಗಿತ್ತು. ಪಂಚಾಯ್ತಿ ಮಾಡಿದಾಗ 4 ದಿನಗಳು ನನ್ನ ಜೊತೆ ಇರುತ್ತಿದ್ದರು, ತದನಂತರ ಮನೆಬಿಟ್ಟು ತವರು ಮನೆಗೆ ಹೋಗುತ್ತಿದ್ದಳು. ಈ ನಡುವೆ ಅರ್ಜಿದಾರಳು ಗರ್ಭವತಿಯಾದಳು. ಆಕೆ ಕಡೂರಿನ ತವರು ಮನೆಯಲ್ಲಿ ಇದ್ದಾಗ ಗರ್ಭವತಿಯಾಗಿರುತ್ತಾಳೆ. ಮತ್ತೊಮ್ಮೆ ಪಂಚಾಯ್ತಿ ಮಾಡಿದಾಗ ಆಕೆ ನನ್ನ ಜೊತೆ ಇರುವುದಿಲ್ಲ ಎಂದು ಹೇಳಿದ್ದು, ಆಗ ನನ್ನ ಅತ್ತೆ ಮಾವ ಮತ್ತು ಆಕೆಯ ಸಂಬಂಧಿಕರು ನನ್ನ ಜೊತೆ ಬಿಟ್ಟು ಹೋಗಿರುತ್ತಾರೆ. ಪುನಃ ಅರ್ಜಿದಾರಳು ಮನೆಯಲ್ಲಿ ಗಲಾಟೆ ಮಾಡಿಕೈಯ್ಯುದ್ದುಕೊಳ್ಳುವುದು ಮತ್ತು ಆತ್ಮಹತ್ಯೆಗೆ ಪ್ರಯತ್ನಿಸಿದಳು, ಆ ನಂತರ 3-4 ಬಾರಿ ಪಂಚಾಯ್ತಿ ನಡೆಸಿದರೂ ಸಹ ಆ ನಂತರ ಆಕೆಯ ತವರು ಮನೆಯವರು ಅರ್ಜಿದಾರಳನ್ನು ಕರೆದುಕೊಂಡು ಹೋಗಿರುತ್ತಾರೆ. ನಂತರ ಮಾನಸ ಆಸ್ಪತ್ರೆಗೆ ಚಿಕಿತ್ಸೆ ಕೊಡಿಸುವುದಾಗಿ ಆಕೆಯ ಮಾವ ಕರೆದುಕೊಂಡು ಹೋಗಿರುತ್ತಾರೆ. ಆಕೆ ಮೊದಲಿನಿಂದಲೂ ಆರೋಗ್ಯ ಸಮಸ್ಯೆ ಇದ್ದು, ಚಿಕಿತ್ಸೆ ಪಡೆಯುತ್ತಿರುವುದು ತಿಳಿಯಿತು.

ನಂತರ ವೈದ್ಯರ ಬಳಿ ವಿಚಾರಿಸಿದಾಗ ಆಕೆ ಮದುವೆಗೂ ಮುನ್ನ ವಿಷ ಸೇವಿಸಿ, 48 ಗಂಟೆಗಳ ಕಾಲ ಪ್ರಜ್ಞಾಹೀನಳಾಗಿ ಇದ್ದದ್ದು ತಿಳಿದುಬಂದಿರುತ್ತದೆ. ನಂತರ ಆಸ್ಪತ್ರೆಯಿಂದ ಪುನಃ ನಾನು ನನ್ನ ಮನೆಗೆ ಕರೆದುಕೊಂಡ ಬಂದಿರುತ್ತೇನೆ. ಅರ್ಜಿದಾರಳು ಗರ್ಭವತಿಯಾದ ಕಾರಣ ಕಡೂರಿನ ಬಾಲಾಜಿ ನರ್ಸಿಂಗ್ ಹೋಂ ನಲ್ಲಿ ಚಿಕಿತ್ಸೆ ಕೊಡಿಸುತ್ತಿದ್ದೆ. ಆಕೆ

ಗರ್ಭವತಿಯಾಗಿದ್ದಾಗ ಅಧಿಕ ರಕ್ತದ ಒತ್ತಡ ಆಗಿ ಚಿಕಿತ್ಸೆಗಾಗಿ ಬಾಣಾವರ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ವೈದ್ಯರು ಆಗುವುದಿಲ್ಲ ಎಂದ ಮೇರೆಗೆ ಕಡೂರಿನ ಬಾಲಾಜಿ ಅಸ್ಪತ್ರೆಗೆ ಕರೆದುಕೊಂಡು ಬಂದಿದ್ದು ಇಲ್ಲೂ ಕೂಡ ಆಗುವುದಿಲ್ಲ ಎಂದು ಹೇಳಿದಾಗ ಚಿಕಿತ್ಸೆಗಾಗಿ ಆಕೆಯನ್ನು ಶಿವಮೊಗ್ಗಕ್ಕೆ ಕರೆದುಕೊಂಡು ಹೋಗಿ 3 ಆಸ್ಪತ್ರೆಗಳಲ್ಲಿ ತೋರಿಸಿದೆ, ಅಲ್ಲೂ ಸಹ ಚಿಕಿತ್ಸೆ ಫಲಕಾರಿಯಾಗುವುದಿಲ್ಲ ಎಂದು ತಿಳಿಸಿದ ಮೇರೆಗೆ ಮಂಗಳೂರಿನ ವೆನ್ ಲಾಕ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಮಂಗಳೂರಿಗೆ ಕರೆದುಕೊಂಡು ಹೋಗುವ ಮುನ್ನ ಶಿವಮೊಗ್ಗದಲ್ಲಿ ಸ್ಕ್ಯಾನಿಂಗ್ ಮಾಡಿಸಿ ಚಿಕಿತ್ಸೆ ಕೊಡಿಸಿದ್ದೆ. ನಂತರ ಮಂಗಳೂರಿನ ವೆನ್ ಲಾಕ್ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಅಲ್ಲಿ ಆಗುವುದಿಲ್ಲ ಎಂದು ತಿಳಿಸಿದಾಗ ನಂತರ ಲೇಡಿ ಗೋಶನ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ. ಅಲ್ಲೂ ಸಹ ಚಿಕಿತ್ಸೆಯನ್ನು ಕೊಡಲಾಗುವುದಿಲ್ಲ ಎಂದು ತಿಳಿಸಿದ್ದರು, ಆದರೆ ಯಾವುದೇ ಅನಾಹುತಗಳಿಗೆ ನಾವೇ ಜವಾಬ್ದಾರರು ತಿಳಿಸಿದ ಮೇರೆಗೆ ಅವರು ಚಿಕಿತ್ಸೆಗಾಗಿ ಅರ್ಜಿದಾರಳನ್ನು ದಾಖಲು ಮಾಡಿಕೊಂಡಿರುತ್ತಾರೆ, ಸದರಿ ಆಸ್ಪತ್ರೆಯಲ್ಲಿ 20 ದಿನಗಳ ಕಾಲ ಚಿಕಿತ್ಸೆ ಕೊಡಿಸಲಾಯಿತು, ಚಿಕಿತ್ಸೆ ನಡೆಯುತ್ತಿರುವಾಗಲೀ ಪುನಃ ರಕ್ತದೊತ್ತಡ ಹೆಚ್ಚಾಗಿ ಅರ್ಜಿದಾರಳು ಫಿಡ್ಸ್ ಬಂದು ಬಿದ್ದಿರುತ್ತಾರೆ, ನಂತರ ಕೆಎಂಸಿ ಆಸ್ಪತ್ರೆಗೆ ದಾಖಲು ಮಾಡಿ ಅಲ್ಲಿ 5 ದಿನಗಳ ಕಾರ ಚಿಕಿತ್ಸೆಯನ್ನು ಕೊಡಿಸಿರುತ್ತೇನೆ.

**ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗಾಗಿ ಸಮಯವಕಾಶವನ್ನು ಕೋರಿದ್ದು, ಅನುಮತಿ ನೀಡಲಾಯಿತು.**

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಸಿ.ಎನ್.ಚಂದನ್)
ಪ್ರಃಪ್ರಃದಃನ್ಯಾಃದಂ.,ರವರು,
ಕಡೂರು.